'ನಾಳೆ ಫೀಸು ಕಟ್ಟಲು ಕಡೇ ದಿನ... ನಮ್ಮ ಹತ್ತಿರ ಹಣ ಎಲ್ಲಿದೆಯಮ್ಮ?...'

ಅಂದೂ ಅಮ್ಮ 'ಹಾಗೆಲ್ಲ ಹೇಳಬಾರದು ನೀನು' ಎಂದು ಅವನ ಬಾಯಿ ಮುಚ್ಚಿಸಿ ಮನೆಯಿಂದ ಹೊರ ನಡೆದಿದ್ದಳು. ಮಗ ಅವಳು ತಿರುಗಿ ಬರುವುದನ್ನೇ ಕಾಯುತ್ತಿದ್ದ.

ತಾಯಿ ದುಡಿಯುವುದನ್ನು ಮತ್ತು ತಮ್ಮಿಬ್ಬರ ಹೊಟ್ಟೆ ತುಂಬಿಸಲು ಹೆಣಗುವುದನ್ನು ನೋಡಿ ಸಂಕಟಪಡುತ್ತಿದ್ದ ಇವ ಅದೆಷ್ಟೋ ಸಲ ಅಮ್ಮನೊಡನೆ ಹೇಳಿದ್ದಿತ್ತು. 'ಅಮ್ಮ ಶಾಲೆ ಬಿಟ್ಟ ನಂತರ ಮತ್ತೆ ರಜಾದಿನಗಳಲ್ಲಿ ನಾನೂ ದುಡಿಯಲು ಹೋಗುತ್ತೇನೆ... ಸ್ವಲ್ಪವಾದರೂ ಹೆಚ್ಚು ಸಂಪಾದನೆಯಾಗುತ್ತದೆ...' ಆಗೆಲ್ಲ ಆಕೆಯದ್ದು ಗದರಿಕೆಯೇ. ನನ್ನ ಕೈಕಾಲು ಗಟ್ಟಿಯಿರುವವರೆಗೆ ನೀನು ನಿನ್ನ ಓದನ್ನು ನೋಡಿಕೋ... ಮುಂದೆ ನೋಡುವಾ...' 'ಹೌದು ಅಮ್ಮ ಏನೂ ಮುದುಕಿಯಲ್ಲ. ಇನ್ನೂ ಪ್ರಾಯವಿದೆ... ಊರಲ್ಲಿ ಸಿಗುವ ಕೆಲಸಗಳಿಂದ ಇಬ್ಬರ ಹೊಟ್ಟೆ ತುಂಬಿಸಲು ಸಾಕಾಗುವಷ್ಟು ಸಂಪಾದನೆ ಆಗುತ್ತಿಲ್ಲ ಅಷ್ಟೆ. ಅದರ ಜೊತೆಗೆ ತನ್ನ ಶಾಲೆಯ ಖರ್ಚು ಬೇರೆ... ಅದಕ್ಕೇ ಕಷ್ಟಪಡುತ್ತಿದ್ದಾಳೆ.'

'ಈ ಅಮ್ಮನಿಗೆ ಹೇಳದೆಯೇ ನಾನು ಕೆಲಸಕ್ಕೆ ಹೋದರೆ ಹೇಗಿರುತ್ತದೆ' ಎನ್ನುವುದು ಮನಸ್ಸಿಗೆ ಬಂದ ಒಂದು ದಿನ ಶಾಲೆ ಬಿಟ್ಟವ ಹೋಗುವಾಗ ಮತ್ತು ಬರುವಾಗ ಒಟ್ಟಿಗೆ ಇರುತ್ತಿದ್ದವರ ಜೊತೆ ತಪ್ಪಿಸಿ ಪೇಟೆಯ ದಾರಿಯಾಗಿ ಹೋಗಿ ಅಲ್ಲಿ ಅಂಗಡಿ ಒಂದರಲ್ಲಿ ಕೆಲಸ ಮಾಡುತ್ತೇನೆಂದು ಸೇರಿದ್ದ. ಸಂಶಯದಿಂದಲೇ ಕೆಲಸ ಕೊಟ್ಟ ಅಂಗಡಿಯ ಯಜಮಾನ ಪೊಟ್ಟಣ ಕಟ್ಟುವುದರ ಜೊತೆಗೆ ಗುಡಿಸುವ ಕೆಲಸವನ್ನೂ ಮಾಡಿಸಿದ್ದ. ಅಂಗಡಿ ಬಾಗಿಲು ಹಾಕುವ ಮುಂಚೆ ಅವನು ಕೊಟ್ಟ ರೂಪಾಯಿಯೋ ಎಂಟಾಣೆಯನ್ನೋ ಜೇಬಿಗಿಳಿಸಿಕೊಂಡು ಮನೆಗೆ ಬಂದರೆ ಅಮ್ಮ ಬಾಗಿಲಲ್ಲಿಯೇ ಕಾಯುತ್ತಿದ್ದಳು. ಇವ ಮಾತನಾಡಲು ಬಾಯಿ ತೆರೆಯುವ ಮುನ್ನವೇ ಇವನನ್ನು ತಬ್ಬಿಕೊಂಡೇ ಒಳಗೆ ಹೋದ ಅವಳು ಅಳುತ್ತಲೇ 'ಬೇಡ ಮಗು... ಈ ದುಡಿಯುವ ಹಟ ಬೇಡ ನಿನಗೆ. ನಾನು ದುಡಿಯುತ್ತೇನೆ... ನೀನು ಓದು... ಓದಿ ದೊಡ್ಡ ಮನುಷ್ಯನಾಗಬೇಕು.. ಈಗಲೇ ಕೆಲಸ ಮಾಡುವ ಹಟ ಬೇಡ ನಿನಗೆ' ಎಂದಿದ್ದಳು. ಇವ ಅಂಗಡಿಯಲ್ಲಿ ಕಸ ಗುಡಿಸುತ್ತಿದ್ದುದನ್ನು ಕಂಡ ಯಾರೋ ಇವನಿಗಿಂತ ಮುಂದಾಗಿಯೇ ಬಂದು ಅವನಮ್ಮನಿಗೆ ವರದಿ ಒಪ್ಪಿಸಿದ್ದರು. ಮನೆಗೆ ಬಂದ ಇವನಿಗೆ ಮಾತನಾಡಲು ಅವಕಾಶವನ್ನೇ ಕೊಟ್ಟಿರಲಿಲ್ಲ ಆ ತಾಯಿ. ಅಂದಿನಿಂದ ತಾನು ದುಡಿಯಲು ಹೋಗುವ ಮಾತನ್ನು ಬಿಟ್ಟೇ ಬಿಟ್ಟಿದ್ದ.

ಇಂದೂ ಅಷ್ಟೆ. ಅಮ್ಮ ಮನೆಗೆ ತಿರುಗಿ ಬರುವಾಗ ಮಧ್ಯರಾತ್ರಿ ಕಳೆದಿತ್ತು. ಏದುಸಿರು ಬಿಡುತ್ತ ಬಂದ ಆಕೆ ಏನೂ ಮಾತಾಡಲಿಲ್ಲ. ಬಂದವಳೇ ಕಾಯುತ್ತಲೇ ಇದ್ದ ಇವನ ಕೈಗೆ ಒಂದಷ್ಟು ನೋಟುಗಳನ್ನು ಕೊಟ್ಟಿದ್ದಳು. ಮಳೆಗಾಲವಲ್ಲದ್ದರಿಂದ ಕೈಯಲ್ಲಿಯೇ ಹಿಡಿದುಕೊಂಡು ಬಂದಿದ್ದರೂ ಆ ನೋಟುಗಳು ಒದ್ದೆಯಾಗಿರಲಿಲ್ಲ. ಸ್ವಲ್ಪ ತೇವವಾಗಿದ್ದಿದ್ದರೆ ಕೈಯಿಂದ ಇಳಿಯುತ್ತಿದ್ದ ಬೆವರಿನಿಂದ ಅಷ್ಟೆ. 'ಎಲ್ಲಿಂದ ತಂದೆಯಮ್ಮ...' ಕೇಳಬೇಕೆಂದುಕೊಂಡು ಅಮ್ಮನ ಮುಖವನ್ನು ನೋಡಿದವನಿಗೆ ಅಲ್ಲಿನ ನಿರ್ಜೀವ ಕಳೆ ಹೆದರಿಸಿತ್ತು ಮತ್ತು ಶಬ್ದಗಳು ಗಂಟಲಿನಲ್ಲೇ ಉಳಿದಿದ್ದವು.

ಊಟವಿಲ್ಲದೆ ದಿನ ಕಳೆಯುವುದು ಅಭ್ಯಾಸವೇ ಆಗಿದ್ದ ತಾಯಿ ಮಗನಿಗೆ ಹಸಿವೆ ಎಂದೂ ಬಾಧಿಸುತ್ತಿರಲಿಲ್ಲ. ಆದರೆ ಅಮ್ಮ ನೀರು ಕುಡಿದು ಮಲಗುವುದನ್ನು ಕಂಡು ಮಗ ಮರುಗುತ್ತಿದ್ದ. ಇದ್ದ ಅಲ್ಪ ಸ್ವಲ್ಪವನ್ನೇ ತಿಂದು ಅರೆ ಹೊಟ್ಟೆಯಲ್ಲಿ ಶಾಲೆಗೆ ಹೋಗುತ್ತಿದ್ದ ಮಗನನ್ನು ಕಂಡು ಆ ತಾಯಿ ಸಂಕಟಪಡುತ್ತಿದ್ದಳು. ಇದ್ದೊಬ್ಬ ಮಗನಿಗೆ ಹೊಟ್ಟೆ ತುಂಬ ಉಣ್ಣಲು ಕೊಡಲು ಸಾಧ್ಯವಾಗದ ತನ್ನ ಅಸಹಾಯಕತೆಯನ್ನು ನೆನೆನೆನೆದು ಮರುಗುತ್ತಿದ್ದಳು.

ಒಮ್ಮೆಯಂತೂ ವಾರದ ಕಾಲ ಆಕೆಗೆ ಕೆಲಸವೇ ಸಿಕ್ಕಿರಲಿಲ್ಲ. ಕೈಯಲ್ಲಿದ್ದುದನ್ನು ಎಷ್ಟು